# ಸಾವಿನ ಭಯ

ಸ್ವರಕ್ಷಣೆಯ ಅಭಿವ್ಯಕ್ತಿ ಸ್ವರೂಪವೇ ಭಯ. ಸ್ವರಕ್ಷಣೆಯು ಎರಡು ವಿಧದಲ್ಲಿ ಸಂದರ್ಭಾನುಸಾರ ಪ್ರಕಟಗೊಳ್ಳುತ್ತದೆ. ಒಂದು– ದೈಹಿಕ ರಕ್ಷಣೆಯ ಆಶಯವಾದರೆ, ಮತ್ತೊಂದು ಬೌದ್ಧಿಕ ರಕ್ಷಣೆಯ ಉದ್ದೇಶದಿಂದ ಕೂಡಿರುವಂಥದ್ದು. ಈ ಎರಡನೆಯ ರಕ್ಷಣೆಯ ಪರಿಧಿಯಲ್ಲಿ ಮನಸ್ಸಿಗುಂಟಾಗುವ ಎಲ್ಲ ಭಯ ಮೂಲಗಳನ್ನು ಸೇರಿಸಿಕೊಳ್ಳಬಹುದು. ತಮ್ಮನ್ನು ತಾವು ಬೌದ್ಧಿಕ ಮಾನಸಿಕ ಪ್ರಕ್ರಿಯೆಗಳ ಎಲ್ಲ ಹಂತಗಳಲ್ಲಿ ಇತರರಿಂದ ರಕ್ಷಿಸಿಕೊಳ್ಳುವುದು ಇದರ ಉದ್ದೇಶ. ಬೌದ್ಧಿಕ– ಮಾನಸಿಕಗಳಿಂದುಂಟಾಗುವ ಆಘಾತಗಳಿಂದ ತಮ್ಮ ಬುದ್ಧಿ– ಮನಸ್ಸು– ಆತ್ಮಗಳನ್ನು ರಕ್ಷಿಸಿಕೊಳ್ಳುವುದರಿಂದ ಒಂದು ಬಗೆಯ ತೃಪ್ತಿ–ಸಮಾಧಾನ ದೊರೆಯುತ್ತದೆ. ಇದರಿಂದ ವ್ಯಕ್ತಿಗೆ ತನ್ನ ಪರಿಸರದಲ್ಲಿ ಆಗಬಹುದಾದ ಅವಮಾನಗಳು ತಪ್ಪಿ, ಸ್ಥಾನಮಾನಗಳು ಹಿರಿದಾಗಬಹುದು. ಈ ಬಗೆಯ ತೃಪ್ತಿಯು– ಅಹಂಕಾರದ ಈಡೇರಿಕೆಯು ಅವನ ದೈಹಿಕ ಆರೋಗ್ಯವನ್ನು ಹೆಚ್ಚಿಸಬಹುದು. ಆದರೆ ಈ ತೃಪ್ತಿ ಅತಿಯಾದಾಗ ಆತ್ಮರತಿಯ ವ್ಯಾಮೋಹವುಂಟಾಗಿ ರೋಗವಾಗಿಯೂ ಪರಿಣಮಿಸಬಹುದು. ಇಲ್ಲಿ ಸ್ವವಿಮರ್ಶೆ ಮತ್ತು ವಿವೇಕಗಳು ಕೆಲಸ ಮಾಡಬೇಕಾಗುತ್ತದೆ.

ದೈಹಿಕ ರಕ್ಷಣೆಯ ಭಯವು ಬಹುಪಾಲು ಪ್ರವೃತ್ತಿಮಟ್ಟದಲ್ಲಿ ಅಭಿವ್ಯಕ್ತವಾಗುತ್ತದೆ. ನಮ್ಮ ಸುಪ್ತ ಮನಸ್ಸು ಸದಾ ತನ್ನ ದೇಹವನ್ನು ಸಂರಕ್ಷಿಸುವ ಕೆಲಸದಲ್ಲಿ ಜಾಗೃತವಾಗಿರುವುದರಿಂದ ನಮ್ಮ ದೇಹ ಯಾವುದೇ ಸೂಕ್ಷ್ಮ ಅಪಾಯಗಳಿಗೂ ಸ್ವರಕ್ಷಣೆಯ ಹಾದಿಯಲ್ಲಿ ವರ್ತಿಸುತ್ತದೆ. ನಮ್ಮ ದೇಹವು ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು, ಮೃಗಗಳಿಂದ ಪಾರಾಗಲು ಮತ್ತು ತನಗಿಂತ ಬಲಶಾಲಿಯಾದ ಶತ್ರುವಿನಿಂದ ಮುಕ್ತನಾಗಲು ಬೌದ್ಧಿಕ ಶಕ್ತಿಯ ನೆರವನ್ನು ಪಡೆಯುತ್ತದೆ. ಈ ಕಾರಣದಿಂದ ರಕ್ಷಣಾತ್ಮಕ ಬೌದ್ಧಿಕ ಶಕ್ತಿಯು ಪ್ರಾಣಿಗಳಲ್ಲಿ ವೃದ್ಧಿಯಾಗುತ್ತಾ ಸಾಗಿಬಂದಿದೆ. ತಮ್ಮ ಮತ್ತು ತಮ್ಮ ಸಂಕುಲಗಳ ರಕ್ಷಣೆಯ ಕಾರಣದಿಂದಾಗಿಯೇ ನಾಗರಿಕತೆಯ ಹಲವಾರು ಮಜಲುಗಳು, ವಿಜ್ಞಾನ– ತಂತ್ರಜ್ಞಾನದ ಅನೇಕ ಬಗೆಯ ಕೌಶಲಗಳು ಸೃಷ್ಟಿಯಾಗಿವೆ.

ತನಗೆ, ತನ್ನ ಕುಟುಂಬಕ್ಕೆ ಅಥವಾ ಸಮುದಾಯಕ್ಕೆ ಬರಬಹುದಾದ ಅಪಾಯಗಳನ್ನು ನಿರೀಕ್ಷಿಸುವ ವ್ಯಕ್ತಿ ಸ್ವರಕ್ಷಣೆಗಾಗಿ ಅನೇಕ ಬಾರಿ ಬುದ್ಧಿಶಾಲಿಯಾಗುವುದರ ಜೊತೆಗೆ ದುಷ್ಟನೂ ಆಗಬಹುದು. ನೂರು ಜನ ಸೋದರರನ್ನು ಹೊಂದಿದ್ದ ದೊರೆ ದುರ್ಯೋಧನ ಕೇವಲ ಐವರೇ ಐವರು ಪಾಂಡವರಿಗೆ ಹೆದರಿಕೊಂಡಿದ್ದಾದರೂ ಏಕೆ? ಬಾಲ್ಯದಿಂದಲೂ ಪಾಂಡವರನ್ನು ಹತ್ತಿರದಿಂದ ನೋಡಿದ್ದ ಅವನಿಗೆ ಅವರ ದೈಹಿಕ– ಬೌದ್ಧಿಕ ಸಾಮರ್ಥ್ಯಗಳು ದಿಗಿಲುಂಟು ಮಾಡಿದ್ದವು. ಹತ್ತು ಸಾವಿರ ಆನೆಗಳ ಬಲವುಳ್ಳ ಭೀಮಸೇನನ ಸಾಮರ್ಥ್ಯವಂತು ಅವನಲ್ಲಿ ವಿಶೇಷವಾದ ಸಾವಿನ ಭಯವನ್ನು ಮೂಡಿಸಿತ್ತು, ಏಕ ಕಾಲದಲ್ಲಿ ತನ್ನ ಒಂದೊಂದು ಕೈಯಲ್ಲಿಯೇ ಭೀಮನು ದುರ್ಯೋಧನನ ಸೋದರರನ್ನು ಹಣ್ಣುಗಾಯಿ ನೀರುಗಾಯಿ ಮಾಡುತ್ತಿದ್ದನಂತೆ! ಈ ಪರಿಯ ಸಂಕಟವನ್ನು ಅನುಭವಿಸುತ್ತಿದ್ದ ತನ್ನವರನ್ನು ರಕ್ಷಿಸಲು ಸದಾ ಪಾಂಡವರು ಹಸ್ತಿನಾವತಿಯಿಂದ ದೂರವಿರುವಂಥ ಯಾವುದಾದರು ಕುಟಿಲ ಉಪಾಯವನ್ನು ದುರ್ಯೋಧನನು ಯೋಚಿಸುತ್ತಿದ್ದ. ಅದು ತನ್ನವರ ರಕ್ಷಣೆಯ ದೃಷ್ಟಿಯಿಂದ ಅನಿವಾರ್ಯವೂ ಆಗಿತ್ತು. ತನ್ನ ದುಷ್ಟ ಚತುಷ್ಟಯ ಕಾರಾಸ್ಥಾನದಲ್ಲಿ ಅವನು ಈ ಬಗ್ಗೆ ತಂತ್ರ ಹೆಣೆಯುತ್ತಿದ್ದ. ಇದು ಸಾವಿನ ಭಯದ ಮೂರ್ತ ಅಭಿವ್ಯಕ್ತಿ, ಸ್ವರೂಪ.

ಸಾವಿನ ಭಯವನ್ನು ಗೆಲ್ಲುವುದು ಸಾಮಾನ್ಯರಿಂದ ಸಾಧ್ಯವಾಗುವ ಮಾತಲ್ಲ, ಸಾವಿನ ಹೊಸ್ತಿಲಲ್ಲಿ ಉಸಿರಾಡುವ ಸಂದರ್ಭದಲ್ಲೂ ಬದುಕುವ ಆಶೆ ಬಲವಾಗಿಯೇ ಕೆಲಸ ಮಾಡುತ್ತಿರುತ್ತದೆ. ಅದನ್ನು ತಪ್ಪೆಂದು ಯಾರೂ ಭಾವಿಸಬಾರದು. ಅದು ಜೀವಿಯ ನೈಜಕ್ರಿಯೆ. ಸದಾ ಸಾವನ್ನು ಎದುರಿಸಿ ಸವಾಲಾಗಿ ತೆಗೆದುಕೊಂಡು ಬದುಕುವುದೇ ಜೀವನದ ಸಹಜ ಪರಿಕ್ರಮ.

ಸಮಾಜದ ಒಳಿತಿಗೆ, ದೇಶದ ದಾಸ್ಯ ಬಿಡುಗಡೆಗೆ ಸಾವನ್ನು ತಾವಾಗಿಯೇ ಸ್ವೀಕರಿಸಲು ಸಿದ್ಧರಾದವರು ಚರಿತ್ರೆಯಲ್ಲಿ ನಮಗೆ ಸಿಗುತ್ತಾರೆ. ಚಂದ್ರಶೇಖರ್ ಅಜಾದ್, ಭಗತ್ ಸಿಂಗ್ ಅಂಥವರು ತಮ್ಮ ಅದಮ್ಯ ದೇಶ ಪ್ರೇಮದ ಫಲವಾಗಿ ಧೀರತನದಿಂದ ಸಾವನ್ನು ಸ್ವೀಕರಿಸುತ್ತಾರೆ. ಅವರಿಗೆ ತಮ್ಮ ದೇಹ ಮುಖ್ಯವಲ್ಲ; ಅದರ ವೈಯಕ್ತಿಕ ವ್ಯಾಮೋಹ ಮುಖ್ಯವಲ್ಲ. ದೇಶದ ಮುಂದೆ ತನ್ನದು ಮತ್ತು ತನ್ನತನವೆಂಬುದು ತೃಣವೆಂದು ಅವರು ಬಗೆದಿದ್ದರು. ದೇಶ ಪ್ರೇಮವೆಂಬುದು ಅವರಿಗೊಂದು ಸೈದ್ಧಾಂತಿಕ ಬದ್ಧತೆಯಾಗಿತ್ತು. ಅದರಂತೆಯೇ ಸೈದ್ಧಾಂತಿಕ ಬದ್ಧತೆಯ ಉಗ್ರಗಾಮಿಗಳು ಮತ್ತು ಮತೀಯ ಉಗ್ರಗಾಮಿಗಳು ಭಿನ್ನರೀತಿಯ ನಂಬಿಕೆ ಮತ್ತು ಶ್ರದ್ಧೆಗಳಿಂದ ತಮ್ಮ ಪ್ರಾಣಹತ್ಯೆ ಮಾಡಿಕೊಳ್ಳಲು ಸಿದ್ಧರಾಗುತ್ತಾರೆ. ಇವರಿಗೆ ಸಮುದಾಯಕ್ಕಿಂತ ಅಥವಾ ದೇಶಕ್ಕಿಂತ ತಾವು ನಂಬಿರುವ ತತ್ತ್ವದ ಶ್ರದ್ಧೆಯೇ ಮುಖ್ಯವಾಗಿ ಬಿಡುತ್ತದೆ.

ಸಾವು ಸೃಷ್ಟಿಯಂತೆಯೇ ಅನಿವಾರ್ಯ ಕ್ರಿಯೆ. ರನ್ನನ ಸಗರ ಚಕ್ರವರ್ತಿ ಹೇಳುವಂತೆ 'ಮಾನವ ಜಂತುಗಳೆಂದು ಪುಟ್ಟಿದರೋ ಅಂದೇ ಸತ್ತರ್!' ಈ ಸತ್ಯವನ್ನು ಮನದ ಮೂಲೆಯಲ್ಲಿ ಭದ್ರಪಡಿಸಿಕೊಂಡು ಮನುಷ್ಯ ನೈತಿಕ ಸಹಜ ನೆಲೆಯಲ್ಲಿ ಬದುಕುವುದು ಮುಖ್ಯವಾಗುತ್ತದೆ.

■ **ಶಿಕಾಕು**

## ಮಾತೇ ಮುತ್ತು

★ ಇಡೀ ಜಗತ್ತನ್ನು ಏಕಸೂತ್ರದಲ್ಲಿ ಬಂಧಿಸುವುದು ಸುಲಭ. ಆದರೆ ಸ್ವತಃ ತನ್ನ ಹೃದಯದಲ್ಲಿನ ಕ್ರೋಧದ ಮೇಲೆ ಜಯ ಸಾಧಿಸುವುದು ಅತ್ಯಂತ ಕಠಿಣ.
–ವಿನೋಬಾ ಭಾವೆ

★ ದುಃಖ ಎನ್ನುವುದು ಸೋಮಾರಿತನದ ಇನ್ನೊಂದು ಮುಖ.
–ಫ್ರಾನ್ಸಿಸ್ ಬೇಕನ್

★ ನಿಮಗೆ ಸೋಲು ಉಂಟಾದಾಗ ಧೃತಿಗೆಡಬೇಡಿ. ಅವಮಾನವಾಯಿತು ಎಂದು ಚಿಂತಿಸಬೇಡಿ. ಅನುಭವವನ್ನು ಧೈರ್ಯದಿಂದ ಎದುರಿಸಿ ಭವಿಷ್ಯಕ್ಕೆ ಉತ್ತಮ ಅಡಿಪಾಯ ಹಾಕಿಕೊಳ್ಳಿ.
–ನೆಪೋಲಿಯನ್

★ ಮೊಟ್ಟ ಮೊದಲ ಪ್ರಜಾತಂತ್ರವಾದಿ ದಾನವ.
–ಬರ್ಟ್ರಾಂಡ್ ರಸೆಲ್

★ ನೀನು ನಾಳೆಯ ಮೇಲೆ ನಂಬಿಕೆ ಇಡಬೇಡ. ನಾಳೆ ನಮಗೆ ಏನು ತರುತ್ತದೆಂದು ಯಾರಿಗೆ ತಾನೇ ಗೊತ್ತಿದೆ.
–ಬೈಬಲ್

★ ನೀವು ಮುಂದೆ ಹೋಗಬೇಕೆಂದಿದ್ದರೆ ಬೇರೆಯವರ ತಪ್ಪುಗಳಿಂದ ಕಲಿತ ಪಾಠಗಳನ್ನು ಸಮಯೋಚಿತವಾಗಿ ಉಪಯೋಗಿಸಬೇಕು.
–ಬಿ.ಆರ್.ಅಂಬೇಡ್ಕರ್

★ ಪುರುಷರ ತಪ್ಪುಗಳಲ್ಲಿ ಅವರ ಸ್ವಾರ್ಥವಿರುತ್ತದೆ. ಸ್ತ್ರೀಯರ ತಪ್ಪುಗಳಲ್ಲಿ ಅವರ ದೌರ್ಬಲ್ಯವಿರುತ್ತದೆ.
–ಮೇಡಂ ಸ್ಟೀಲ್

★ ಅಸಫಲತೆ ನಿರಾಸೆಯ ಸಂಕೇತವಲ್ಲ, ಅದು ಪ್ರೇರಣೆಗೆ ಮಾರ್ಗದರ್ಶಕ.
–ಸೌಥ್

★ ಪ್ರಶಂಸೆಯನ್ನು ತಿರಸ್ಕರಿಸುವುದರ ಅರ್ಥವೆಂದರೆ ಇನ್ನೊಮ್ಮೆ ಪ್ರಶಂಸೆ ಕೇಳಲು ನೀನು ಕಾತುರನಾಗಿದ್ದೀಯೆ ಎಂದೇ ಆಗಿದೆ.
–ತಿರುವಳ್ಳುವರ್

★ ಹಣಕ್ಕಾಗಿ ತನ್ನನ್ನು ತಾನೇ ಮಾರಿಕೊಳ್ಳುವ ಪುರುಷ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ.
–ಅನಕೃ

★ ಸಂಪತ್ತು ಇರುವುದು ಸುಖ, ವಿಲಾಸ, ವಿಹಾರಗಳಿಗೆ ಅಲ್ಲ. ಹಾಗೆ ಮಾಡುವುದು ಐಶ್ವರ್ಯದ ದುರುಪಯೋಗ.
–ಪ್ರೇಮ್‌ಚಂದ್

★ ಸುಳ್ಳು, ಮೋಸ ಮಾಡುವವನಿಗೆ ದೊಡ್ಡ ಶಿಕ್ಷೆ ಎಂದರೆ ಅವನನ್ನು ಯಾರೂ ನಂಬುವುದಿಲ್ಲ ಎಂದಲ್ಲ, ಅವರು ಯಾರನ್ನೂ ನಂಬಲಾಗುವುದಿಲ್ಲ ಎಂಬುದು.
–ಕೀಟ್ಸ್